

ಸ್ಮಾಲ್ ಪ್ಲಿವ ಲೇಕ್



ಯಾಯ್ಚೆ ಕೋಟೆ

ಸುತ್ತಿ ಬಳಸುವ ರಸ್ತೆಗಳು, ಅತ್ತ ನೀಲಿಯೂ ಅಲ್ಲದ, ಇತ್ತ ಹಸಿರೂ ಅಲ್ಲದ, ವೈಢೂರ್ಯ ವರ್ಣದ ನೀರನ್ನು ಹೊತ್ತ ಕೆರೆಗಳು, ಆ ಎತ್ತೆತ್ತರದ ಬೆಟ್ಟಗಳ ಪಾದಗಳನ್ನು ತೊಳೆಯುವಂತೆ ಹರಿದು, ಚಿಮ್ಮಿ ಅಲ್ಲಲ್ಲಿ ಜಲಪಾತಗಳಾಗಿ ಅತಿ ಸುಂದರ ಎಂಬ ಶಬ್ದವೂ ಸಾಲದೆಂಬಂತಹ ಸೌಂದರ್ಯವನ್ನು ಸೃಷ್ಟಿಸಿದ ನದಿಗಳು, ಒಟ್ಟಿನಲ್ಲಿ ಭೂಲೋಕ ಸ್ವರ್ಗವೆನ್ನುವಂತಿತ್ತು. ಬೋಸ್ನಿಯಾ ಮತ್ತು ಹರ್ಜೆಗೋವಿನ. ತುಜ್ಲಾದಲ್ಲಿ ಇಳಿದ ನಾವು, ಮೊಸ್ಟಾರ್, ಪೋಚಿಟೆಲಿ, ಸುತೆಸ್ಕಾ ರಾಷ್ಟ್ರೀಯ ಉದ್ಯಾನವನ ಇವೆಲ್ಲವನ್ನು ನೋಡಿ ದೇಶದ ರಾಜಧಾನಿ ಸರಾಯೇವೋಗೆ ಬಂದು ಉಳಿದಿದ್ದೆವು. ಮುಂದೆ ಪ್ರಕೃತಿಯ ಮಡಿಲಲ್ಲಿರುವ ಪುಟ್ಟ ಊರು ಯಾಯ್ಚೆಯನ್ನು ನೋಡಬೇಕೆನ್ನುವುದು ನಮ್ಮ ಯೋಜನೆಯಾಗಿತ್ತು.

ಸರಾಯೇವೋದಿಂದ ಉತ್ತರಕ್ಕೆ ಸುಮಾರು 150 ಕಿ.ಮೀ. ದೂರದಲ್ಲಿ, ಪ್ಲಿವ ಮತ್ತು ವರ್ಬಾಸ್ ನದಿಗಳ ಸಂಗಮ ಸ್ಥಳದ ಆಚೀಚೆಗೆ ಹರಡಿಕೊಂಡಿದ್ದ ಸುಂದರ ಊರು ಯಾಯ್ಚೆಗೆ ಬಸ್ಸಿನ ಪಯಣ. ನಮ್ಮನ್ನು ಹೊತ್ತ ಬಸ್ಸು ತಿರುವಾಗಿದ್ದ ರಸ್ತೆಗಳಲ್ಲಿ ಉತ್ಸಾಹದಿಂದ ಚಲಿಸುತ್ತಿತ್ತು. ನಿರಭ್ರವಾದ ನೀಲಾಕಾಶದಲ್ಲಿ ಹೊಳೆಯುತ್ತಿದ್ದ ಸೂರ್ಯ ಎಲ್ಲೆಡೆ ಬಿಸಿಲನ್ನು ಹರಡಿದ್ದ.



ಎಲ್ಲೆಲ್ಲೂ ಅರಳಿದ್ದ ಬಣ್ಣ ಬಣ್ಣದ ಹೂಗಳು ಮಂದಾನಿಲದ ಹೊಡೆತಕ್ಕೆ ಬಾಗಿ ಬಳುಕಿ ವಸಂತದ ಚೆಲುವನ್ನು ವೃದ್ಧಿಸಿದ್ದವು. ಬೆಟ್ಟ ಗುಡ್ಡಗಳೆಲ್ಲ ಹಸಿರುಡುಗೆ ಹೊತ್ತು ಮೆರೆಯುತ್ತಿದ್ದರೆ, ಅಲ್ಲೆಲ್ಲೋ ಕೊರಕಲಿನಲ್ಲಿ ಹರಿಯುತ್ತಿದ್ದ ಹಳ್ಳ ಜುಳು ಜುಳು ನಿನಾದ ಹೊರಡಿಸುತ್ತಿತ್ತು. ದಾರಿಯಲ್ಲಿ ಸಿಕ್ಕ ಚಿಕ್ಕ ಪುಟ್ಟ ಹಳ್ಳಿಗಳನ್ನು ದಾಟಿ ಸುಮಾರು ಮೂರು ಗಂಟೆಗಳ ಬಸ್ ಪ್ರಯಾಣ ಮಾಡಿ ಯಾಯ್ಚೆ ತಲುಪಿದೆವು ನಾವು. ಅಲ್ಲಿಂದ 4–5 ಕಿ.ಮೀ.ಗಳಷ್ಟು ದೂರದಲ್ಲಿದ್ದ ನೂರಾರು ವರ್ಷಗಳ ಹಳೆಯ ನೀರಿನ ಗಿರಣಿಗಳನ್ನು ನೋಡುವುದು ನಮ್ಮ ಪಟ್ಟಿಯಲ್ಲಿತ್ತು.

ನಮ್ಮ ಬಸ್ ಹೇಗೂ ಅದೇ ದಾರಿಯಲ್ಲಿ ಮುಂದೆ ಹೋಗುತ್ತಿತ್ತಾದ್ದರಿಂದ ಅಲ್ಲೇ ಇಳಿದುಕೊಳ್ಳಬಹುದು ಎಂದು ಲೆಕ್ಕ ಹಾಕಿ ಚಾಲಕನ ಬಳಿ ಮಾತನಾಡಿದೆವು. ಬೋಸ್ನಿಯನ್ ಭಾಷೆ ಬಾರದ ನಾವು, ಇಂಗ್ಲಿಷ್ ಬಾರದ ಆತನಿಗೆ ತಿಳಿಸಿ ಹೇಳುವಷ್ಟರಲ್ಲಿ ಬಸ್ ಬಹಳಷ್ಟು ಮುಂದೆ ಬಂದಾಗಿತ್ತು. ಆತನದು ಎಕ್ಸ್‌ಪ್ರೆಸ್ ಬಸ್ ಆಗಿದ್ದರಿಂದ, ಮಧ್ಯದಲ್ಲೆಲ್ಲೂ ನಿಲ್ಲಿಸಲು ಸಾಧ್ಯವಿಲ್ಲ ಎಂದು ಹೇಳಿ, ಯಾಯ್ಚೆ ಇಂದ 10 ಕಿ.ಮೀ. ದೂರದಲ್ಲಿದ್ದ ಜೆಝೆರೋ ಎಂಬಲ್ಲಿ ನಮ್ಮನ್ನಿಳಿಸಿದ. ಇಲ್ಲಿಂದ ಟ್ಯಾಕ್ಸಿ ಮಾಡಿಕೊಂಡು ಹೋಗಿ ಎಂಬರ್ಥ ಬರುವಂತೆ ಟ್ಯಾಕ್ಸಿ ಟ್ಯಾಕ್ಸಿ ಎಂದು ಹೇಳಿ ಹೊರಟೇಹೋದ.

ನಾವಿಳಿದ ಜೆಝೆರೋ ಎಂಬ ಸ್ಥಳದಲ್ಲಿ, ಮನುಷ್ಯರೊಬ್ಬರೂ ಕಂಡುಬರಲಿಲ್ಲ. ಮಧ್ಯದ ಡಾಂಬರು ರಸ್ತೆಯಲ್ಲಿ ಆಗಾಗ ಓಡಾಡುತ್ತಿದ್ದ ಕಾರುಗಳನ್ನು ಬಿಟ್ಟರೆ, ಅಲ್ಲೇ ಚಾಪೆ ಹಾಸಿ ಮಲಗಿ ಬಿಡೋಣವೆನ್ನುವಷ್ಟು ಪ್ರಶಾಂತವಾಗಿತ್ತು ಆ ಜಾಗ. ಆಕಾಶದ ಅಚ್ಚ ನೀಲಿ ಹಾಗೂ ಆಚೀಚೆ ಒತ್ತೊತ್ತಾಗಿದ್ದ ಗುಡ್ಡಗಳ ಹಸಿರನ್ನು ತನ್ನಲ್ಲಿ ಪ್ರತಿಫಲಿಸುತ್ತಾ ಪ್ಲಿವ ನದಿ ಪಕ್ಕದಲ್ಲಿ ಗಂಭೀರವಾಗಿ ಹರಿಯುತ್ತಿತ್ತು. ದಡದಲ್ಲಿ ಒಂದಷ್ಟು ಸ್ವಾಲೋ ಹಕ್ಕಿಗಳು, ಗೂಡು ಕಟ್ಟಲು ಮಣ್ಣು ಕೆದಕಿ ಕೊಕ್ಕಿನಲ್ಲಿ ತುಂಬಿಸಿಕೊಳ್ಳುತ್ತಿದ್ದವು. ಅಷ್ಟು ಗೆಲುವಾದ ವಾತಾವರಣವಿದ್ದ ಕಾರಣ ಯಾಯ್ಚೆಗೆ ನಾವು ನಡೆದೇ ಹೋಗೋಣವೆಂದು ತೀರ್ಮಾನಿಸಿ, ನಿಧಾನವಾಗಿ ಹೆಜ್ಜೆ ಹಾಕಿದೆವು. ಈ ಪ್ಲಿವ ನದಿ ತಾನು ಹರಿಯುವ ದಾರಿಯಲ್ಲಿ ಹಲವಾರು ನೈಸರ್ಗಿಕ ಕೆರೆಗಳನ್ನು ಸೃಷ್ಟಿಸಿದೆ. ಅದರಲ್ಲೊಂದಾದ ಗ್ರೇಟ್ ಪ್ಲಿವ ಲೇಕ್ (ವೆಲಿಕೋ ಪ್ಲೀವ್ಸ್ಕೊ ಜೆಝೆರೋ) ಎಂದು ಕರೆಸಿಕೊಳ್ಳುವ ಕೆರೆಗೆ ಸಮೀಪವಾಗಿ, ಬೆಳೆದು ನಿಂತ ಪುಟ್ಟ ಹಳ್ಳಿಯೇ ಜೆಝೆರೋ. ಸ್ಲಾವಿಕ್ ಭಾಷೆಯಲ್ಲಿ ಜೆಝೆರೋ ಎಂದರೆ ಕೆರೆ ಎಂಬರ್ಥ.

ಗ್ರೇಟ್ ಪ್ಲಿವ ಲೇಕ್‌ನ ಪಕ್ಕದಲ್ಲೇ ನಮ್ಮ ಹಾದಿ ಸಾಗುತ್ತಿತ್ತು. ಹಸಿರು ಹುಲ್ಲುಗಳ ನಡುವೆ ಅಲ್ಲಲ್ಲಿ ಚುಕ್ಕೆ ಇಟ್ಟಂತೆ ಕೆಂಪು, ಬಿಳಿ, ಹಳದಿ, ನೇರಳೆ ಬಣ್ಣದ ಹೂಗಳರಳಿದ್ದವು. ಕೆರೆಯ ನೀರು ಅಲೆಗಳಿಲ್ಲದೆ ಸ್ತಬ್ಧವಾಗಿ, ದರ್ಪಣದಷ್ಟು ಶುಭ್ರವಾಗಿ, ಕಂಡದ್ದೆಲ್ಲವನ್ನೂ ತಾನೇ ತಾನಾಗಿ ಪ್ರತಿಫಲಿಸುತ್ತಿತ್ತು. ಅಲ್ಲಲ್ಲಿ ಬೇಕೆನಿಸಿದಷ್ಟು ಹೊತ್ತು ನಿಂತು, ಕೂತು ನಿಧಾನವಾಗಿ ಪ್ಲಿವ ನದಿಗೆ ಅಡ್ಡವಾಗಿ ಕಟ್ಟಲಾದ ನೀರಿನ ಗಿರಣಿಗಳ ಬಳಿಗೆ ಬಂದೆವು. ದೂರದಿಂದ ನೋಡಿದಾಗ ಹರಿಯುವ ಝರಿಯ ಮೇಲಿನ ಪುಟ್ಟ ಮನೆಗಳಂತೆ ಕಂಡವು ಅವು. ನೀರಿನ ಜುಳು ಜುಳು ನಿನಾದ, ಬೆಳೆದ ಹಾವಸೆಗಳು, ಅವುಗಳ ಮಧ್ಯದಲ್ಲಿ ಅಲ್ಲಲ್ಲಿ ಚಿಕ್ಕ ಚಿಕ್ಕ ಗಿರಣಿಗಳಿದ್ದ ದೃಶ್ಯ ಅಪರೂಪವಾಗಿತ್ತು.

ಸುಮಾರು 18–19ನೇ ಶತಮಾನದಲ್ಲಿ ಬಳಕೆಯಲ್ಲಿದ್ದಿರಬಹುದು ಎಂದು ಹೇಳಲಾಗುವ ಈ ಗಿರಣಿಗಳನ್ನು ಓಕ್ ಮರದ ಹಲಗೆಗಳಿಂದ ಮಾಡಲಾಗಿದೆ. ಸುತ್ತಮುತ್ತಲ ಹಳ್ಳಿಗರು ತಮ್ಮ ಗೋಧಿ, ಜೋಳಗಳನ್ನು ಬೀಸಿ ಹಿಟ್ಟು ಮಾಡಿಕೊಳ್ಳಲು ಇಲ್ಲಿಗೆ ಬರುತ್ತಿದ್ದರಂತೆ. ಮುಂದೆ ಇಪ್ಪತ್ತನೆಯ ಶತಮಾನದ